ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.654/2019 ,

ಚಾಸಾ– 1, ಪ್ರಾಸಾ –1

| | |
|---|---|
| ಹೆಸರು | ಅಶೋಕ್ ಶೆಟ್ಟಿ |
| ತಂದೆಯ ಹೆಸರು | ರಾಘು ಶೆಟ್ಟಿ |
| ವಯಸ್ಸು | 55 ವರ್ಷ |
| ಕೆಲಸ | ಅಂಗಡಿ |
| ವಾಸ | ಮಾಸ್ತಿಕಟ್ಟೆ |
| ಪ್ರಮಾಣೀಕರಿಸಿದ ದಿನಾಂಕ | 01–08–2023 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಮೃತ ಮಹಾಬಲ ಶೆಟ್ಟಿ ಗೊತ್ತು . ದಿಃ 07–01–2019 ರಂದು ಸಂಜೆ 7–30 ಗಂಟೆ ಸಮಯದಲ್ಲಿ ಮೃತ ಮಹಾಬಲ ಶೆಟ್ಟಿಯವರು ಅಂಗಡಿಗೆ ಬರುತ್ತಿದ್ದಾಗ , ನ್ಯಾಯಾಲಯದ ಮುಂದೆ ಇರುವ ಆರೋಪಿ ತನ್ನ ದ್ವಿಚಕ್ರವಾಹನ ಸಂಖ್ಯೆ ಕೆಎ–19 ಎಂ.ಜೆ 9866 ರ ಕೆನಟಿಕ್ ಹೊಂಡಾದಲ್ಲಿ ಅತೀವೇಗವಾಗಿ ಬಂದು ರಸ್ತೆಯ ತೀರ ಬದಿಗೆ ಇದ್ದ ಮೃತ ಮಹಾಬಲ ಶೆಟ್ಟಿಯವರಿಗೆ ಡಿಕ್ಕಿ ಪಡಿಸಿರುತ್ತಾನೆ . ಆಗ ಅವರ ಕಾಲು ತುಂಡಾಗಿ ರಕ್ತ ಬರುತ್ತಿರುತ್ತದೆ . ಆಗ ಅವರಿಗೆ ಪ್ರಜ್ಞೆ ತಪ್ಪಿರುತ್ತದೆ . ನಂತರ ಹಲವಾರು ಜನರು ಸೇರಿ , ಆ್ಯಂಬುಲೆನ್ಸ್‌ನಲ್ಲಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ . ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಎ.ಜೆ ಆಸ್ಪತ್ರೆಗೆ ಕಳುಹಿಸಿರುತ್ತೇವೆ .

2. ಅಪಘಾತವಾದ ದಿನ ನಾನು ಈ ಬಗ್ಗೆ ದೂರನ್ನು ದಾಖಲು ಮಾಡಿರುತ್ತೇನೆ . ಅದನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ವಾಹನದ ಛಾಯಚಿತ್ರವನ್ನು ನೋಡಿ ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಛಾಯಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು.

3. ದಿಃ 08-01-2019 ರಂದು ಪೊಲೀಸರುಎ ಸ್ಥಳಕ್ಕೆ ಬಂದು ನಾನು ತೋರಿಸಿದ ಮೇರೆಗೆ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಮಹಜರನ್ನು ಜರುಗಿಸಿರುತ್ತಾರೆ . ಸರಿದ ಮಹಜರನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ-3 ಎಂದು , ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಕರಡು ನಕ್ಷೆಯನ್ನೂ ಸಹ ತಯಾರಿಸಿರುತ್ತಾರೆ . ಸಾಕ್ಷಿ ಕರಡು ನಕ್ಷೆಯನ್ನು ನೋಡಿ ಗುರುತಿಸಿದ ಮೇರೆಗೆ ಕರಡು ನಕ್ಷೆಯನ್ನು ನಿಪಿ-4 ಎಂದು , ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಮೇಲ್ಕಂಡ ಸ್ಕೂಟರನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಮಹಜರನ್ನು 5-00 ಗಂಟೆಯ ನಂತರ ಮಾಡಿರುತ್ತಾರೆ. ದಿಃ 09-01-2019 ರಂದು ಮಹಾಬಲಶೆಟ್ಟಿಯವರು ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿದ್ದು , ಈ ಬಗ್ಗೆ ಮರುಹೇಳಿಕೆಯನ್ನು ನೀಡಿರುತ್ತೇನೆ. ಮೃತ ಮಹಾಬಲಶೆಟ್ಟಿಯವರ ಶವ ಮಹಜರ್ ಸಮಯದಲ್ಲಿ ನಾನು ಹಾಜರಿದ್ದೆನು.

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

1. ಮಹಾಬಲಶೆಟ್ಟಿಯವರು ಅಬ್ದುಲಾ ರವರ ಮನೆಯಲ್ಲಿ ಅಡಿಗೆ ಕೆಲಸವನ್ನು ಮಾಡುತ್ತಿದ್ದರು . ಅಡಿಗೆ ಕೆಲಸ ಮುಗಿಸಿ ನಮ್ಮ ಅಂಗಡಿಗೆ ಸಾಮಾನು ಖರೀದಿಸಲು ಬರುತ್ತಿದ್ದರು .

4. ನಮ್ಮ ಅಂಗಡಿಯಿಂದ ಪೊಲೀಸ್ ಠಾಣೆಗೆ ವಾಹನದಲ್ಲಿ ಹೋದರೆ 5 ನಿಮಿಷಗಳ ದಾರಿ ಎಂದರೆ ಸರಿ . ಅಪಘಾತವಾದ ದಿನವೇ ಪೊಲೀಸರು ಬಂದು ನಮ್ಮನ್ನು ವಿಚಾರಣೆ ಮಾಡಿರುತ್ತಾರೆ . ಅಪಘಾತವಾದ ದಿನ ಪೊಲೀಸರು ರಾತ್ರಿ 8-00 ಗಂಟೆಗೆ ಬಂದಿರುತ್ತಾರೆ . ಅಪಘಾತ ಹೇಗೆ ಆಯಿತು ಎಂದು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಆಗ ನಾನು ಹೇಗೆ ಅಪಘಾತವಾಯಿತು ಎಂದು ಹೇಳಿರುತ್ತೇನೆ . ನಾನು ಅಂಗಡಿಯ ಒಳಗೆ ಕೆಲಸ ಮಾಡುತ್ತಿದ್ದೆ ಎಂದು ಪೊಲೀತರಿಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ ನನ್ನ ಹೆಂಡತಿ ಅಂಗಡಿಯ ಒಳಗೆ ಇದ್ದರು ನಾನು ಹೊರಗೆ ಇದ್ದೆ. ಅಂಗಡಿಯ ಮುಂಭಾಗದಲ್ಲಿ ಸುಮಾರು 7-8 ಜನ ಗಿರಾಕಿಗಳು ಇದ್ದರು .

5. ನಮ್ಮ ಅಂಗಡಿಯ ಎದುರುಗಡೆ ಕಾಂಪೌಂಡ್ ಗೋಡೆ ಇಲ್ಲ . ನಮ್ಮ ಅಂಗಡಿಯ ಎದುರುಗಡೆ ಕಾಂಪೌಂಡ್ ಗೋಡೆ ಇದೆ ಎಂದು ನಕ್ಷೆಯಲ್ಲಿ ಬರೆದಿದೆ ಎಂದರೆ ಅಂಗಡಿಯ ಬದಿಯಲ್ಲಿ ಇದೆ . ಅಪಘಾತವಾದ ದಿನ ರಾತ್ರಿ 8-00 ಗಂಟೆಗೆ ಬಂದ ಪೊಲೀಸರಿಗೆ ಅಪಘಾತ ಎಲ್ಲಿ ಆಗಿದೆ ಎಂದು ತೋರಿಸಿರುತ್ತೇನೆ . ಅಪಘಾತವಾದ ಸ್ಥಳದಲ್ಲಿ ರಕ್ತದ ಕಲೆ ಇತ್ತು ಆದರೆ ವಾಹನದ ಗಾಜು ಒಡೆದು ಹೋಗಿರಲಿಲ್ಲ . ಮಹಾಬಲಶೆಟ್ಟಿಯವರ ಎಡಕಾಲು ಮುರಿದು ಹೊಯಿತು. ಮಹಾಬಲಶೆಟ್ಟಿಯವರ ಕುಟುಂಬಸ್ಥರು ಪರಿಹಾರಕ್ಕೆ ಅರ್ಜಿಯನ್ನು ಮಂಗಳೂರಿನಲ್ಲಿ ಸಲ್ಲಿಸಿರುತ್ತಾರೆ. ಅವರಿಗೆ ಪರಿಹಾರ ಸಿಕ್ಕಿದೆ , ಎಷ್ಟು ಎಂದು ಗೊತ್ತಿಲ್ಲ . ಅಲ್ಲಿ ನನ್ನ ಸಾಕ್ಷಿ ವಿಚಾರಣೆ ಆಗಿಲ್ಲ . ಅಪಘಾತ ವಿಷಯಕ್ಕೆ ಸಂಬಂಧಪಟ್ಟಂತೆ 2-3 ಬಾರಿ ಠಾಣೆಗೆ ಹೋಗಿರುತ್ತೇನೆ . ಯಾಕೆಂದರೆ ಒಮ್ಮೊಮ್ಮೆ ಪೊಲೀಸರು ಇರುತ್ತಿರಲಿಲ್ಲ ಹಾಗಾಗಿ ವಾಪಸ್ಸು ಬಂದಿರುತ್ತೇನೆ .

6. ಪೊಲೀಸ್ ಠಾಣೆಯಲ್ಲಿ ನಾನು 2 ಸಹಿಗಳನ್ನು ಹಾಕಿರುತ್ತೇನೆ . ಅದು ನಿಪಿ-3 ಮತ್ತು ನಿಪಿ-4 ಆಗಿರುತ್ತದೆ . ಅಬ್ದುಲ್ಲಾ ರವರ ಮನೆ ಮೂಡಬಿದ್ರೆಯಿಂದ ಇರುವೈಲ್ ಗೆ ಹೋಗುವ ಬಲಬದಿಯಲ್ಲಿ ಅವರ ಮನೆ ಇದೆ . ನಮ್ಮ ಅಂಗಡಿ ಮೂಡಬಿದ್ರೆಯಿಂದ ಇರುವೈಲ್ ಗೆ ಹೋಗುವ ಎಡಬದಿಗೆ ಇದೆ . ಅಪಘಾತ ಸ್ಥಳದಲ್ಲೇ ಮಹಾಬಲ ಶೆಟ್ಟಿಯವರು ಬಿದ್ದಿರುತ್ತಾರೆ . ಸ್ಕೂಟರ್ ಮಹಾಬಲ ಶೆಟ್ಟಿಯವರು ಬಿದ್ದ ಜಾಗದಿಂದ 150 ಮೀಟರ್ ಮುಂದೆ ಹೋಗಿ ಬಿದ್ದಿರುತ್ತದೆ . ಪೊಲೀಸರ ಬಳಿ ಹೇಳಿಕೆ ನೀಡುವಾಗ ಮಹಾಬಲ ಶೆಟ್ಟಿಯವರು ನಮ್ಮ ಅಂಗಡಿಗೆ ಬರುತ್ತಿದ್ದರು ಎಂದು ಹೇಳಿಕೆ ನೀಡಿರುತ್ತೇನೆ . ದಿಃ 08-01-2019 ರಂದು ಈ ದಿನ ಕೊಟ್ಟ ಲಿಖಿತ ಪಿರ್ಯಾದಿನಲ್ಲಿ ಮಹಾಬಲ ಶೆಟ್ಟಿಯವರು ನನ್ನ ಅಂಗಡಿಯ ಕಡೆಗೆ ನಡೆದುಕೊಂಡು ಬರುತ್ತಿದ್ದರು ಎಂಬುದಾಗಿ ನಾನು ಬರೆದದ್ದು ಸರಿಯಲ್ಲ ಎಂದು ನಾನು ಹೇಳಿಕೆ ಕೊಟ್ಟಿರುವುದಿಲ್ಲ.

7. ಡಾಂಬಾರು ರಸ್ತೆಯಲ್ಲಿ ಬೈಕಿನ ಬ್ರೇಕ್ ಮಾರ್ಕ್ ಇತ್ತು . ಈ ವಿಚಾರವನ್ನು ಮಹಜರಿನಲ್ಲಿ ಬರೆದಿರುತ್ತಾರೆ. ಅದೇ ರೀತಿ ಬೈಕಿನ ಬ್ರೇಕ್ ಮಾರ್ಕ್ ಇರುವ ಬಗ್ಗೆ ಪೊಲೀಸರು ನಕ್ಷೆಯಲ್ಲಿಯೂ ಸಹ ಕಾಣಿಸಿರುತ್ತಾರೆ. ಬ್ರೇಕ್ ಮಾರ್ಕ್ ಇರುವ ಸ್ಥಳದಲ್ಲೇ ಅಪಘಾತವಾಗಿರುತ್ತದೆ . ನಾನು ಅಂಗಡಿಯ ಹೊರಗೆ ಗಿರಾಕಿಗಳ ಜೊತೆ ಮಾತನಾಡುತ್ತಿದ್ದೆ . ಆ ನನಗೆ ಮಹಾಬಲ ಶೆಟ್ಟಿಯವರ ಬೊಬ್ಬೆ ಕೇಳಿರುತ್ತದೆ . ಸಾಕ್ಷಿ ಮುಂದುವರಿದು ನಾನು ಅಪಘಾತವನ್ನು ನೋಡಿರುತ್ತೇನೆ . ನಾನು ರಸ್ತೆಗೆ ಮುಖಮಾಡಿ ಇರುವ ಅಂಗಡಿಯ ಬಲಬದಿಯಲ್ಲಿ ಇದ್ದೆ .

8. ನಮ್ಮ ಅಂಗಡಿಯ ಎಡಬದಿಯಲ್ಲಿ ಗಿರಾಕಿಗಳು ಇದ್ದರು ಅವರೊಂದಿಗೆ ಮಾತನಾಡುತ್ತಿದ್ದೆವು . ಶಬ್ದ ಕೇಳಿ ಗಿರಾಕಿಗಳೆಲ್ಲರೂ ಓಡಿ ಹೋದರು . ನಾನು ಕೂಡ ಹೋಗಿರುತ್ತೇನೆ . ಅಪಘಾತ ಸ್ಥಳದಲ್ಲಿ ಐಮಾಸ್ಕ ಲೈಟ್ ಇದೆ . ನಕ್ಷೆ ಮತ್ತು ಮಹಜರಿನಲ್ಲಿ ಸದರಿ ಲೈಟಿನ ಬಗ್ಗೆ ನಮೂದಿಸಿರುತ್ತಾರೆ . ಮಹಾಬಲಶೆಟ್ಟಿಯವರು ಆತ್ಮೀಯರು ಎಂದರೆ ಸರಿ . ಮಹಾಬಲಶೆಟ್ಟಿ ಯವರಿಗೆ ಪರಿಹಾರ ಸಿಗಲೆಂದು ನಾನು ಸಾಕ್ಷಿ ಹಾಕಿರುತ್ತೇನೆ. ಮಹಾಬಲಶೆಟ್ಟಿಯವರ ಕುಟುಂಬದವರು ಪರಿಹಾರವನ್ನು ಸಿಗಲೆಂದು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಅಪಘಾತವನ್ನು ನೋಡಿರುವ ಕಾರಣ ನೀಡಿರುತ್ತೇನೆ .

9. ಮಹಾಬಲಶೆಟ್ಟಿಯವರ ಕುಟುಂಬದವರು ವಿಮಾ ಪರಿಹಾರವನ್ನು ಸಿಗಲೆಂದು ದೂರನ್ನು ದಾಖಲು ಮಾಡಿರುತ್ತೇನೆ . ಅಲ್ಲಿ ದಾರಿ ದೀಪ ಇರಲಿಲ್ಲ ಎಂದರೆ ಸರಿಯಲ್ಲ. ಡಾಂಬಾರು ರಸ್ತೆಯಲ್ಲಿ ರಕ್ತ ಬಿದ್ದದ್ದನ್ನು 8-00 ಗಂಟೆಗೆ ಬಂದ ಪೊಲೀಸರು ನೋೀಡಿರುತ್ತಾರೆ. ಸದರಿ ವಿಚಾರವನ್ನು ಮಹಜರಿನಲ್ಲಿ ಬರೆದಿರುತ್ತಾರೆ. ನಾನು ಅಪಘಾತವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಮಹಾಬಲಶೆಟ್ಟಿಯವರು ಒಮ್ಮೆಲೆ ರಸ್ತೆಯನ್ನು ದಾಟಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸರಿಕಾರಿ ಶಾಲೆಯಿಂದ ಇರುವೈಲು ಕಡೆಗೆ 100 ಮೀಟರ್ ದೂರದಲ್ಲಿ ಅಬ್ದುಲಾ ರವರ ಮನೆ ಇದೆ . ಅಪಘಾತವಾದ ದಿವಸ 8-00 ಗಂಟೆಗೆ ಬಂದ ಪೊಲೀಸರು ಸ್ಕೂಟರನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ.

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ